■ ಶಶಿಕುಮಾರ್ ಸಿ.

# ಭಾರತೀಯ ಸೇನೆಗೆ ಹೈಟೆಕ್ ‘ಸ್ಟೀಗ್’



ತಂತ್ರಜ್ಞಾನವೇ ಭವಿಷ್ಯ ಎಂದು ನಂಬಿರುವ ಕೆಲವು ದೇಶಗಳು ತಮ್ಮ ರಕ್ಷಣಾ ವಲಯದಲ್ಲಿ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ಗಂಭೀರ ಪ್ರಯತ್ನ ನಡೆಸಿವೆ. ಈ ಸಾಲಿಗೆ ಭಾರತವೂ ಸೇರಿದ್ದು, ದೇಶದ ಸೇನೆಗೆ ಹೈಟೆಕ್ ಸ್ಪರ್ಶ ನೀಡಲು ಈಚೆಗೆ ‘ಸ್ಟೀಗ್’ (ಸಿಗ್ನಲ್ಸ್ ಟೆಕ್ನಾಲಜಿ ಎವಾಲ್ಯುಯೇಷನ್ ಅಂಡ್ ಅಡಾಪ್ಟೇಷನ್ ಗ್ರೂಪ್) ಹೆಸರಿನ ಪಡೆಯೊಂದು ರೂಪುಗೊಂಡಿದೆ.

6ಜಿ, ಕೃತಕ ಬುದ್ಧಿಮತ್ತೆ (ಎಐ), ಮಷೀನ್ ಲರ್ನಿಂಗ್ ಮತ್ತು ಸೇನೆಯು ಬಳಸುವ ಆ್ಯಪ್‌ಗಳಿಗಾಗಿ ಕ್ವಾಂಟಮ್ ಕಂಪ್ಯೂಟಿಂಗ್‌ನಂತಹ ಭವಿಷ್ಯದ ಸಂವಹನ ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಮೌಲ್ಯಮಾಪನದ ಕೆಲಸವನ್ನು ಈ ಪಡೆ ಮಾಡಲಿದೆ. ದೇಶದ ಮೇಲೆ ಎರಗಬಹುದಾದಂತಹ ತಂತ್ರಜ್ಞಾನ ಆಧರಿತ ದಾಳಿಗಳನ್ನು ಸಮರ್ಥವಾಗಿ ಎದುರಿಸುವುದು ಈ ಪಡೆಯ ಮುಖ್ಯ ಉದ್ದೇಶ. ಭವಿಷ್ಯದ ಯುದ್ಧಗಳನ್ನು ಗಮನದಲ್ಲಿಟ್ಟುಕೊಂಡು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸೇನೆ ಕೈಗೊಳ್ಳುತ್ತಿರುವ ಹಲವು ಕ್ರಮಗಳಲ್ಲಿ ಇದೂ ಒಂದು.

‘ಸ್ಟೀಗ್’ ವಿಭಾಗವು ಸೇನೆಗೆ ಅಗತ್ಯವಾದ ತಂತ್ರಜ್ಞಾನ ನೆರವು ಒದಗಿಸಲಿದೆ. ವಿಶೇಷ ತಂತ್ರಜ್ಞಾನ ಬಳಸುವ ಸಾಮರ್ಥ್ಯ ಹೊಂದುವ, ತಂತ್ರಜ್ಞಾನ ಆಧರಿತವಾಗಿ ತಲೆದೋರುವ ಸಮಸ್ಯೆಗಳಿಗೆ ಅತ್ಯಾಧುನಿಕ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಇದು ಕೆಲಸ ಮಾಡಲಿದೆ. ಕರ್ನಲ್ ಶ್ರೇಣಿಯ ಸೇನಾ ಅಧಿಕಾರಿಯು ‘ಸ್ಟೀಗ್’ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಜಗತ್ತಿನ ಹಲವು ದೇಶಗಳು ಅತ್ಯಾಧುನಿಕ ತಂತ್ರಜ್ಞಾನದ ಜಾಡು ತುಳಿದು, ಅದರಲ್ಲಿ ಹಿಡಿತ ಸಾಧಿಸಲು ಹಾತೊರೆಯುತ್ತಿವೆ. ಆ ತಂತ್ರಜ್ಞಾನವನ್ನು ಶತ್ರು ದೇಶಗಳನ್ನು ಹಣಿಯಲೂ ಬಳಸಿಕೊಳ್ಳುವತ್ತ ಮುಂದಾಗಿವೆ. ಇಂತಹ ಸನ್ನಿವೇಶವು ದೇಶಕ್ಕೆ ಎದುರಾದರೂ ಅದನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಸ್ಟೀಗ್ ಪಡೆ ಕಾರ್ಯನಿರ್ವಹಿಸಲಿದೆ.

ಯುದ್ಧದ ಸ್ವರೂಪಗಳೇ ಬದಲಾಗುತ್ತಿರುವ ಸದ್ಯದ ಸಂದರ್ಭದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಸೇನಾ ಮುಖ್ಯಸ್ಥ ಜ. ಮನೋಜ್ ಪಾಂಡೆ ಇತ್ತೀಚೆಗಷ್ಟೇ ಹೇಳಿದ್ದರು. ಆ ಮಾತಿಗೆ ಪೂರಕವೆನ್ನುವಂತೆ, ‘ಸ್ಟೀಗ್’ ವಿಶೇಷ ಪಡೆಯನ್ನು ಸೇನೆಯು ರಚಿಸಿದೆ. ಎಲೆಕ್ಟ್ರಾನಿಕ್ ವಿನಿಮಯಗಳು, ಮೊಬೈಲ್ ಸಂವಹನಗಳು, ಸಾಫ್ಟ್‌ವೇರ್ ಆಧರಿತ ರೇಡಿಯೊಗಳು, ವಿದ್ಯುನ್ಮಾನ ಯುದ್ಧ ವ್ಯವಸ್ಥೆಗಳು, 5ಜಿ ಮತ್ತು 6ಜಿ ಜಾಲಗಳು, ಕ್ವಾಂಟಮ್ ತಂತ್ರಜ್ಞಾನ, ಎಐ, ಮಷೀನ್ ಲರ್ನಿಂಗ್ ಮುಂತಾದ ತಂತ್ರಜ್ಞಾನಗಳಲ್ಲಿ ಇದು ವಿಶೇಷ ಪರಿಣತಿ ಹೊಂದುವ ಕಾಯಕದಲ್ಲಿ ತೊಡಗಲಿದೆ. ■

## ಯುಪಿಐ: ಈಗ ಫ್ಲಿಪ್‌ಕಾರ್ಟ್ ಸಮಯ




ಆನ್‌ಲೈನ್ ಪೇಮೆಂಟ್ ಆ್ಯಪ್‌ಗಳಾದ ಗೂಗಲ್ ಪೇ, ಫೋನ್ ಪೇ ಮಾದರಿಯಲ್ಲಿ, ವಾಲ್‌ಮಾರ್ಟ್ ಸಂಸ್ಥೆ ಒಡೆತನದ ಫ್ಲಿಪ್‌ಕಾರ್ಟ್ ಇದೇ ಮೊದಲ ಬಾರಿಗೆ ಯುಪಿಐ ಹ್ಯಾಂಡಲ್ ಪರಿಚಯಿಸಿದೆ. ಇದನ್ನು ಬಳಸಿಕೊಂಡು ಹಣ ವರ್ಗಾವಣೆಯನ್ನು ಸರಾಗವಾಗಿ ಮಾಡಬಹುದು. ಫ್ಲಿಪ್‌ಕಾರ್ಟ್ ಒದಗಿಸುತ್ತಿರುವ ಈ ಸೇವೆಗೆ ಫ್ಲಿಪ್‌ಕಾರ್ಟ್ ಹ್ಯಾಂಡಲ್ ಎಂದು ಹೆಸರಿಸಲಾಗಿದೆ.

ಫ್ಲಿಪ್‌ಕಾರ್ಟ್‌ಗೆ ಲಾಗಿನ್ ಆಗಿರುವ ಮತ್ತು ಆಗುವ ಎಲ್ಲ ಗ್ರಾಹಕರಿಗೂ ಈ ಸೌಲಭ್ಯ ದೊರಕಲಿದ್ದು, ಸೂಪರ್ ಕಾಯಿನ್‌ಗಳು, ಕ್ಯಾಶ್‌ಬ್ಯಾಕ್, ಮೈಲ್‌ಸ್ಟೋನ್‌ನಂತಹ ಉಡುಗೊರೆಯನ್ನು ಕಂಪನಿ ಒದಗಿಸಲಿದೆ. ಬ್ರ್ಯಾಂಡ್ ವೋಚರ್ ಮುಂತಾದ ಲಾಯಲ್ಟಿ ಫೀಚರ್‌ಗಳನ್ನೂ ಇದು ಒಳಗೊಂಡಿದೆ.

ಯುಪಿಐ ಸೇವೆ ಒದಗಿಸಲು ಕಂಪನಿಯು ಆ್ಯಕ್ಸಿಸ್ ಬ್ಯಾಂಕ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸದ್ಯ ಆ್ಯಂಡ್ರಾಯ್ಡ್ ಬಳಕೆದಾರರಿಗೆ ಮಾತ್ರ ಈ ಸೇವೆ ಸಿಗಲಿದೆ. ಬಳಕೆದಾರರು @fkaxis ಹ್ಯಾಂಡಲ್ ಮೂಲಕ ಯುಪಿಐಗೆ ಲಾಗಿನ್ ಆಗುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಕಂಪನಿಯು ಒದಗಿಸುತ್ತಿರುವ ಈ ಸೇವೆಯನ್ನು ತನ್ನ ವೇದಿಕೆಯಲ್ಲಷ್ಟೇ ಅಲ್ಲದೇ ಹೊರಗೂ ಬಳಸಬಹುದು. ಆನ್‌ಲೈನ್ ಮತ್ತು ಆಫ್‌ಲೈನ್ ವ್ಯಾಪಾರ ವಹಿವಾಟುಗಳನ್ನೂ ಇದರ ಮೂಲಕ ನಡೆಸಬಹುದು. ಮೊಬೈಲ್ ರೀಚಾರ್ಜ್, ಕ್ರೆಡಿಟ್ ಕಾರ್ಡ್ ಮತ್ತು ವಿದ್ಯುತ್ ಬಿಲ್ ಪಾವತಿಯಂತಹ ಸೇವೆಗಳನ್ನು ಇದು ಒದಗಿಸಲಿದೆ. ■

## ವಿದೇಶಿ ಪಾವತಿಗೆ ವ್ಯಾಟ್ಸ್‌ಆ್ಯಪ್ ತಯಾರಿ

ಗೂಗಲ್ ಪೇ, ಫೋನ್ ಪೇ ನಂತರ ವಿದೇಶದಲ್ಲೂ ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಆಧರಿತ ಪಾವತಿ ಸೇವೆಯನ್ನು ಭಾರತೀಯರಿಗೆ ಕಲ್ಪಿಸುವ ನಿಟ್ಟಿನಲ್ಲಿ ವಾಟ್ಸ್‌ಆ್ಯಪ್ ಸಹ ಮುಂದಾಗಿದೆ. ಈ ಹೊಸ ಫೀಚರ್ ಬಳಕೆ ಬಗ್ಗೆ ಬೀಟಾ ಬಳಕೆದಾರರೊಬ್ಬರು ತಮ್ಮ ಎಕ್ಸ್ ಖಾತೆಯಲ್ಲಿ ಸ್ಕ್ರೀನ್‌ಶಾಟ್ ಹಂಚಿಕೊಂಡಿದ್ದಾರೆ.

ಹೊಸ ಫೀಚರ್ ಇನ್ನೂ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರವೇ ಬಳಕೆಗೆ ಲಭ್ಯವಾಗಲಿದೆ. ಯುಪಿಐ ಆಧರಿತ ಅಂತರರಾಷ್ಟ್ರೀಯ ಪಾವತಿ ಸೇವೆಯನ್ನು ವಾಟ್ಸ್‌ಆ್ಯಪ್ ಬಳಕೆದಾರರು ಗರಿಷ್ಠ ಮೂರು ತಿಂಗಳವರೆಗೆ ಚಾಲ್ತಿಯಲ್ಲಿರುವಂತೆ ರೂಪಿಸಿಕೊಳ್ಳಬಹುದಾಗಿದೆ. ದೇಶದ ಹೊರಗೂ ಯುಪಿಐ ಪಾವತಿ ಸೇವೆ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆಯನ್ನಿಟ್ಟಿತ್ತು. ■